ಗಮನ ಸೆಳೆಯುವ ಸೂಚನೆ

ಮೈಸೂರು ನಗರ ಪಾಲಿಕೆಯಲ್ಲಿ ಚುನಾಯಿತ ಸದಸ್ಯರ ಕ್ಷೇತ್ರ ವಿಂಗಡಣೆಯಲ್ಲಿ ಅಗಾಧವಾದ ವ್ಯತ್ಯಾಸಗಳಾಗಿರುವುದು.

ಶ್ರೀ ವೇದಾಂತ ಹೆಮ್ಮಿಗೆ.—ಮೈಸೂರು ನಗರ ಪಾಲಿಕೆಯಲ್ಲಿ ಚುನಾಯಿತ ಸದಸ್ಯರ ಕ್ಷೇತ್ರ ವಿಂಗಡಣೆಗೆ ಮಂತ್ರಿ ಮತದಾರ ವಿಂಗಡಣೆಯಲ್ಲಿ ಅಗಾಧವಾದ ವ್ಯತ್ಯಾಸಗಳಾಗಿರುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಈ ಕೆಳಕಂಡ ಹೇಳಿಕೆಯನ್ನು ಓದಬಯಸುತ್ತೇನೆ.

೧೯೭೬ರ ಕರ್ನಾಟಕ ಮುನಿಸಿಪಲ್ ಕಾರ್ಪೊರೇಶನ್ ಕಾಯಿದೆಯ ಪ್ರಕರಣ ೭ರ ಪ್ರಕಾರ ಮಹಾನಗರ ಸದಸ್ಯರ ಸಂಖ್ಯೆ ೫೦ಕ್ಕಿಂತ ಕಡಿಮೆ ಮತ್ತು ೧೦೦ಕ್ಕೆ ಹೆಚ್ಚಿಲ್ಲದಂತೆ ನಿಗದಿಪಡಿಸಬೇಕೆಂದಿದೆ. ಈ ಸದಸ್ಯರ ಒಟ್ಟು ಸಂಖ್ಯೆಯ ಶೇಕಡ ೨೦ರಷ್ಟು ಮಹಿಳೆಯರಿಗಾಗಿ ಮೀಸಲಾಗಿರಿಸಿದೆ. ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳಿಗಾಗಿ ನಗರದ ಒಟ್ಟು ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಜನಸಂಖ್ಯೆ ಗಣನೆಗೆಣವಾಗಿ ಅನುಸೂಚಿತ ಬುಡಕಟ್ಟುಗಳ ಸಂಖ್ಯೆ ೫೦ ಕ್ಕಿಂತ ಹೆಚ್ಚಾಗಿದ್ದರೆ ಅವರಿತಾಗಿ ಕನಿಷ್ಟಪಕ್ಷ ಒಂದು ಸ್ಥಾನ ಮೀಸಲಿಡಬೇಕೆಂದಿದೆ.

ಮೇಲಿನ ಕಾಯಿದೆ ಪ್ರಕರಣ ೨೧ರ ಪ್ರಕಾರ ಮಹಾನಗರ ಸಭೆ ಪ್ರದೇಶವನ್ನು ನಿಗದಿಪಡಿಸಿದ ಸದಸ್ಯರ ಸಂಖ್ಯೆ ಗಣನೆಗೆಣವಾಗಿ ವಿಭಾಗಗಳನ್ನಾಗಿ ವಿಂಗಡಿಸಬೇಕು. ಹಾಗೆ ವಿಂಗಡಿಸುವಾಗ ಪ್ರತಿ ವಿಭಾಗ ನಿಕಟವಾದ ಮತ್ತು ಹತ್ತಿರ ಕೊಂಡಿರುವ ಪ್ರದೇಶಗಳನ್ನೊಳಗೊಂಡಿರಬೇಕು ಮತ್ತು ಸಾಧ್ಯವಾದ ಮಟ್ಟಿಗೆ ಪ್ರತಿ ವಿಭಾಗದ ಜನಸಂಖ್ಯೆ ಒಂದೇ ಸಮನಾಗಿರಬೇಕು. ಅಲ್ಲದೆ, ಸದಸ್ಯರ ಸ್ಥಾನಗಳ ಸಂಖ್ಯೆಯನ್ನು ನಿರ್ದಿಷ್ಟಪಡಿಸುವಾಗ ಮತ್ತು ಪ್ರತಿ ವಿಭಾಗದ ಎಲ್ಲೆಯನ್ನು ನಿರ್ದಿಷ್ಟಪಡಿಸುವಾಗ, ೨೦೦೦ ವರ್ಷಗಳ ನಂತರ ತೆಗೆದುಕೊಳ್ಳುವ ಜನಗಣತಿಯಂತರೆಗೆ, ೧೯೭೧ರ ಜನಗಣತಿಯೇ ಆಧಾರ ವಾಗಿರುತ್ತದೆ.

ಮೂರರಿಂದ ಆರು ಲಕ್ಷಗಳಷ್ಟು ಜನಸಂಖ್ಯೆಯುಳ್ಳ ಮಹಾ ನಗರದ ಸದಸ್ಯರ ಸಂಖ್ಯೆ ೫೭ ಇರಬೇಕೆಂದು ಸರ್ಕಾರ ನಿರ್ದಿಷ್ಟಪಡಿಸಿದೆ.

೧೯೭೧ರ ಜನಗಣತಿಯು ಪ್ರಕಾರ ಮೈಸೂರು ಮಹಾ ನಗರದ ಜನಸಂಖ್ಯೆ ೩,೫೫,೬೮೫ ಇರುವುದರಿಂದ ಈ ಮಹಾ ನಗರಸಭೆಯ ಸದಸ್ಯರ ಸಂಖ್ಯೆಯನ್ನು ೫೭ಕ್ಕೆ ನಿಗದಿಪಡಿಸಿ ನಿಕಟವಾದ ಮತ್ತು ಹತ್ತಿರ ಪ್ರದೇಶಗಳನ್ನು ತೆಗೆದುಕೊಂಡು ಪ್ರತಿ ವಿಭಾಗದ ಜನಸಂಖ್ಯೆ ಸರಾಸರಿ ಸಾಧ್ಯವಾದ ಮಟ್ಟಿಗೆ ಸಮನಾಗಿರುವಂತೆ ೫೭ ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಈ ೫೭ ವಿಭಾಗಗಳಲ್ಲಿ ಮಹಿಳೆಯರಿಗಾಗಿ ಅವರ ಶೇಕಡವಾರು ಜನಸಂಖ್ಯೆ ಹೆಚ್ಚಿಗೆಯುಳ್ಳ ೧೧ ವಿಭಾಗ (ಅಂದರೆ ಒಟ್ಟಿನಲ್ಲಿ ಸ್ಥಾನಗಳ ಶೇಕಡ ೨೦) ಮತ್ತು ಅನುಸೂಚಿತ ಜಾತಿಯವರಿಗೆ (ಅವರ ಜನಸಂಖ್ಯೆ ೩೧,೨೮೧) ಅವರ ಜನಸಂಖ್ಯೆ ಪ್ರಮಾಣ ಹೆಚ್ಚಾಗಿ ಇದ್ದ ೫ ವಿಭಾಗ ಮೀಸಲಾಗಿಡಲಾಗಿದೆ. ಮತ್ತು ಅನುಸೂಚಿತ ಪಂಗಡದವರಿಗೆ ಜನಸಂಖ್ಯೆ ಪ್ರಮಾಣ ೫೦ಕ್ಕಿಂತ ಕಡಿಮೆ ಇದ್ದಿದ್ದರಿಂದ ಅವರಿಗೆ ಯಾವ ವಿಭಾಗವನ್ನೂ ಮೀಸಲಾಗಿಟ್ಟಿಲ್ಲ.

ಮೇಲೆ ಹೇಳಿದಂತೆ ಸೀಮಾ ವಿಂಗಡಣೆಯನ್ನು ೧೯೭೧ರ ಜನಗಣತಿಯ ಜನಸಂಖ್ಯೆಯ ಆಧಾರದ ಮೇಲೆ ಮಾಡಬೇಕೆಂದಿದೆಯೇ ಹೊರತು ಮತದಾರರ ಸಂಖ್ಯೆಯ ಆಧಾರದ ಮೇಲೆ ಮಾಡಬೇಕೆಂದಿಲ್ಲ. ಒಂದು ವೇಳೆ ಪ್ರತಿ ವಿಭಾಗದ ಮತದಾರರ ಸಂಖ್ಯೆಯಲ್ಲಿ ಬಹಳ ವ್ಯತ್ಯಾಸಗಳಿದ್ದರೂ ಕೂಡ ಸದಸ್ಯರ ಸ್ಥಾನದ ಸಂಖ್ಯೆ ಅಥವಾ ಸೀಮಾ ವಿಂಗಡಣೆಯಲ್ಲಿ, ೨೦೦೦ ವರ್ಷದ ನಂತರದ ಜನಗಣತಿಯವರೆಗೆ ಏನೂ ಬದಲಾವಣೆ ಮಾಡಲು ಮೇಲಿನ ಕಾಯಿದೆ ಪ್ರಕಾರ ಸಾಧ್ಯವಿಲ್ಲ.

ಶ್ರೀ ವೇದಾಂತ ಹೆಮ್ಮಿಗೆ.—ಈ ಮೈಸೂರು ನಗರ ಪಾಲಿಕೆಯಲ್ಲಿ ವಾರ್ಡ್‌ಗಳನ್ನು ವಿಂಗಡಣೆ ಮಾಡುವಾಗ ಒಂದು ವಾರ್ಡ್‌ನಲ್ಲಿ ೨೫,೦೦೦ ಮತದಾರರು, ಮತ್ತೊಂದು ವಾರ್ಡಿನಲ್ಲಿ ೩,೦೦೦

ಮತದಾರರು, ಮಗದೊಂದು ವಾರ್ಡ್‌ನಲ್ಲಿ ೧೦,೦೦೦ ಮತದಾರರು, ಮತ್ತೊಂದರಲ್ಲಿ ೮,೦೦೦ ಮತದಾರರು ಇದ್ದಾರೆ. ಈ ವಾರ್ಡ್‌ಗಳನ್ನು ಯಾವ ಆಧಾರದ ಮೇಲೆ ವಿಂಗಡಣೆ ಮಾಡಿದ್ದೀರಿ? ಈ ರೀತಿ ಒಂದು ವಾರ್ಡಿನಲ್ಲಿ ೨,೫೦೦ ಮತದಾರರು, ಇನ್ನೊಂದು ವಾರ್ಡಿನಲ್ಲಿ ೧೦,೦೦೦ ಮತದಾರರು ಆಗಿರಬೇಕಾದರೆ, ಇದನ್ನು ಯಾವ ಆಧಾರದ ಮೇಲೆ ಮಾಡಲಾಯಿತು? ಕ್ಷೇತ್ರಗಳನ್ನು ವಿಂಗಡಣೆ ಮಾಡುವಾಗ ಇದನ್ನು ಪರಿಶೀಲನೆ ಮಾಡಲಿಲ್ಲವೆ? ಇದಕ್ಕೆ ಸರ್ಕಾರದಿಂದ ಉತ್ತರ ಕೊಡಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ. ಮಾನ್ಯ ಸದಸ್ಯರು ಏನೇನು ಈ ವಿಚಾರದಲ್ಲಿ ಹೇಳಿದ್ದಾರೆ, ಆ ಬಗ್ಗೆ ವಿವರಗಳನ್ನು ತರಿಸಿ ಎಗ್ಸಾಮಿನ್ ಮಾಡುತ್ತೇನೆ. ಕಾನೂನು ಸ್ಪಷ್ಟವಾಗಿದೆ. ೨೦೦೦ದ ಇಸವಿಯವರೆಗೆ ಅಸೆಂಬ್ಲಿ ಕ್ಷೇತ್ರಗಳನ್ನೂ ಕೂಡ ವಿಂಗಡಣೆ ಮಾಡುವ ಹಾಗೆ ಇಲ್ಲ. ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳನ್ನೂ ಕೂಡ ವಿಂಗಡಣೆ ಮಾಡುವ ಹಾಗೆ ಇಲ್ಲ. ಈ ಬಗ್ಗೆ ಮಾನ್ಯ ಸದಸ್ಯರು ಏನೇನು ವಿಚಾರಗಳನ್ನು ಹೇಳುತ್ತಿದ್ದಾರೆ ಅವುಗಳನ್ನು ತರಿಸಿ ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಡೀ-ಲಿಮಿಟೇಷನ್ ಮಾಡಬೇಕಾದರೆ ಕಾನೂನು ಪ್ರಕಾರ ಅಬ್ಜೆಕ್ಷನ್ ಕಾಲ್‌ಫಾರ್ ಮಾಡಬೇಕಾಗುತ್ತದೆ. ಆದರೆ ಈಗ ಏನಾಗಿದೆ ಎಂದರೆ there is no equity and justice so far as the divisions are concerned. ಇದಕ್ಕೋಸ್ಕರ ದಯವಿಟ್ಟು ಚುನಾವಣೆ ಹತ್ತಿರ ಬರುತ್ತಿದೆ. ರೀ-ಆರ್ಗನೈಜೇಷನ್ ಆಫ್ ವಾರ್ಡ್ಸ್ ಎಂದು ಮಾಡಿ. ೧,೦೦೦ ಅಥವಾ ೫೦೦ ಹೆಚ್ಚು ಕಡಿಮೆ ಆಗಬಹುದು. ವಾರ್ಡ್‌ಗಳ ರೀ-ಅರ್ಗನೈಜೇಷನ್ ಅನ್ನು ಮಾಡುವುದಕ್ಕೆ ಸರ್ಕಾರ ಆದೇಶ ಕೊಡುತ್ತದೆಯೇ?

ಶ್ರೀ ಎಸ್.ಆರ್. ಬೊಮ್ಮಾಯಿ.—ಕಾನೂನು ಪ್ರಕಾರ ಪರೀಕ್ಷೆ ಮಾಡಿಸುತ್ತೇನೆ. ಸಾಧ್ಯವಾದರೆ ಇದನ್ನು ಮಾಡುತ್ತೇನೆ.

೧-೩೦ ಪಿ.ಎಂ.

ಹೊಳೇನರಸೀಪುರದ ಪಿಎಲ್‌ಡಿ ಬ್ಯಾಂಕಿನಲ್ಲಿನ ಕಾರ್ಯದರ್ಶಿ ಅವರು ಸಂಪಾರು ೧೪ ಲಕ್ಷ ರೂಪಾಯಿ ಹಣವನ್ನು ದುರುಪಯೋಗ ಮಾಡಿ ಕಾಣೆಯಾಗಿದ್ದು ಇಲಾಖೆಯವರು ಯಾವುದೇ ತನಿಖೆಯನ್ನು ಮಾಡಿಸದೆ ಅದನ್ನು ಮುಚ್ಚಿ ಹಾಕುತ್ತಿರುವುದು.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಹೊಳೆನರಸೀಪುರದ ಪಿಎಲ್‌ಡಿ ಬ್ಯಾಂಕಿನಲ್ಲಿನ ಕಾರ್ಯದರ್ಶಿ ಅವರು ಸುಮಾರು ೧೪ ಲಕ್ಷ ರೂಪಾಯಿ ಹಣವನ್ನು ದುರುಪಯೋಗ ಮಾಡಿ ಕಾಣೆಯಾಗಿದ್ದು ಇಲಾಖೆಯವರು ಯಾವುದೇ ತನಿಖೆಯನ್ನು ಮಾಡಿಸದೆ ಅದನ್ನು ಮುಚ್ಚಿ ಹಾಕುತ್ತಿರುವ ಬಗ್ಗೆ ಮಾನ್ಯ ವಾತಾ, ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಪ್ರಕಾಶ್ ಅವರ ಪರವಾಗಿ ಸಹಕಾರ ಸಚಿವರ ಈ ಹೇಳಿಕೆಯನ್ನು ನಿಮ್ಮ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ.

ಹೊಳೇನರಸೀಪುರದ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನಲ್ಲಿ ಹಿಂದೆ ೨೬-೧೧-೮೯ರಿಂದ ೧೨-೭-೮೯ರವರೆಗೆ, ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದ ಶ್ರೀ ಎಂ.ಸಿ. ಚಂದ್ರಪ್ಪಗೌಡರು ಬ್ಯಾಂಕಿನಲ್ಲಿ ಸದಸ್ಯರಿಂದ ವಸೂಲಾದ ಹಣದಲ್ಲಿ ರೂ.೩.೩೪ ಲಕ್ಷ ೨೧ ಗಳನ್ನು ಇಲಾಖೆಯವರು ಬ್ಯಾಂಕಿಗೆ ಭೇಟಿ ನೀಡಿದಾಗ ಹಾಜರುಪಡಿಸದೇ ದುರುಪಯೋಗ ಪಡಿಸಿಕೊಂಡಿರುತ್ತಾರೆ. ಇವರು ಕರ್ನಾಟಕ ರಾಜ್ಯ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ನೌಕರರಾಗಿರುತ್ತಾರೆ. ಇವರು ಹೊಳೇನರಸೀಪುರದ ಪ್ರಾಥಮಿಕ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಾಗ ನಡೆಸಿದ ಅವ್ಯವಹಾರಗಳನ್ನು ಗಮನಿಸಿ ರಾಜ್ಯ ಬ್ಯಾಂಕಿನವರು ಇವರನ್ನು ಅಮಾನತ್ತಿನಲ್ಲಿಟ್ಟಿರುತ್ತಾರೆ. ೧೯೮೬-೮೭ನೇ ಸಾಲಿನಲ್ಲಿ ಸಾಲ ವಿತರಣೆಯಲ್ಲಿ ಅವ್ಯವಹಾರಗಳು ನಡೆದಿರುವ ಬಗ್ಗೆ ದೂರುಗಳು ಸರ್ಕಾರದ ಗಮನಕ್ಕೆ ಬಂದಿದ್ದು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ ೬೪ರ ವಿಚಾರಣೆಗೆ ದಿನಾಂಕ ೨೯-೭-೮೯ರ ರಂದು

ಆದೇಶ ನೀಡಿರುತ್ತೆ. ಸಹಕಾರ ಅಭಿವೃದ್ಧಿ ಅಧಿಕಾರಿ, ಅರಕಲಗೂಡು, ಇವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಿದ್ದು ವಿಚಾರಣೆಯಂ ಪ್ರಗತಿಯಲ್ಲಿರುತ್ತೆ. ಕಲಂ ೬೪ರ ವಿಚಾರಣೆ ಪೂರ್ಣಗೊಂಡು ವರದಿ ಬಂದ ನಂತರ ದುರುಪಯೋಗವಾದ ಹಣದ ಖಚಿತ ಮೊತ್ತ ಹಾಗೂ ಇತರ ವಿವರಗಳು ಲಭ್ಯವಾಗುತ್ತವೆ. ವರದಿ ಬಂದ ನಂತರ ತಪ್ಪಿತಸ್ಥರ ಮೇಲೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದನ್ನು ಪೂರ್ತಿ ಮಾಡುವುದಕ್ಕೆ ಎಷ್ಟು ವರ್ಷ ಬೇಕಾಗುತ್ತದೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಆದಷ್ಟು ಬೇಗ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಬ್ಬ ಮನುಷ್ಯ ೧೪ ಲಕ್ಷ ರೂಪಾಯಿಗಳನ್ನು...

ಅಧ್ಯಕ್ಷರು.—ಕಾಲಿಂಗ್ ಅಟೆಂಷನ್ ಮೇಲೆ ವಕಾಲತ್ತು ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜನರ ಪರವಾಗಿ ವಕಾಲತ್ತು ಮಾಡುತ್ತೇನೆ. ಈ ಕೃತ್ಯವಾದದ ಹಿಂದೆ ಗಣ್ಯವ್ಯಕ್ತಿಗಳು ಯಾರು ಇದ್ದಾರೆ ? ಇವರ ಹಿಂದೆ ಯಾರು ಇಲ್ಲದಿದ್ದರೆ ಇಂತಹ ಕೆಲಸ ಮಾತಲಂ ಸಾಧ್ಯವಾಗುವುದಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರೇ, ಮೆಲ್ನೋಟಕ್ಕೇ ಇದರ ಹಿಂದೆ ಯಾರು ಇದ್ದಾರೆ ಎಂದು ಕಂಡುಬರುವುದಿಲ್ಲ. ಇಷ್ಟು ಮಾತ್ರ ಸರ್ಕಾರದ ಪರವಾಗಿ ಹೇಳುತ್ತೇನೆ. ಈ ಬಗ್ಗೆ ವಿಚಾರಣೆಯನ್ನು ಆದಷ್ಟು ಬೇಗನೆ ಮಾಡಿಸಿ ತಪ್ಪಿತಸ್ಥರ ಮೇಲೆ ಕಠಿಣ ಕ್ರಮವನ್ನು, ತಪ್ಪು ಮಾಡಿದ್ದಾರೆಂದು ಕಂಡುಬಂದರೆ ಖಂಡಿತವಾಗಿ ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಂದು ನಿಮ್ಮ ಹೇಳಿಕೆಯಲ್ಲೇ ಹೇಳಿದ್ದೀರಿ. ಇದರಿಂದ ಹಣದ ದುರುಪಯೋಗ ಆಗಿದೆ ಎಂದೂ ಗೊತ್ತಾಗುವುದಿಲ್ಲವೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಇದನ್ನು ವಿಚಾರಣೆ ಹೇಳಬೇಕಲ್ಲವೇ ?

ಶ್ರೀ ಕೆ. ಹೆಚ್. ಪಾಟೀಲ್.—ನಿಯಮ ೬೪ರ ಪ್ರಕಾರ ಒಂದೆರಡು ತಿಂಗಳುಗಳ ಒಳಗೆ ಎನ್‌ಕ್ವೈರಿ ಮಾಡಬೇಕು. ಹಾಗೆ ಎನ್‌ಕ್ವೈರಿ ಮಾಡದೇ ಇರುವ ಅಧಿಕಾರಿಗಳ ಮೇಲೆ ಕೂಡಾ ಕ್ರಮ ತೆಗೆದುಕೊಳ್ಳಬೇಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಷ್ಟು ತಿಂದರೆ ತಕ್ಷಣ ಆಕ್ಷನ್ ತೆಗೆದುಕೊಳ್ಳುತ್ತೀರಿ ಎಂಬುದನ್ನಾದರೂ ಹೇಳಿ. ಇಲ್ಲಿ ೧೪ ಲಕ್ಷ ರೂಪಾಯಿ ದುರುಪಯೋಗವಾಗಿದೆ.

SRI P.G.R. SINDHIA.—Government will take suitable and timely action.

MATTER UNDER RULE 334

ಮಿತವೇತನ ಪದವೀಧರರ ಸೇವೆಯಂನ್ನು ಸಕ್ರಮಗೊಳಿಸುವುದು

SRI R. VENKATARAMAIAH.—In Karnataka State the Stipendiary Graduates who are about 8000 in number are yet to be absorbed. Since 10 years, they are struggling to get themselves absorbad. The Government which promised them several times to get them permanent jobs is yet unable to provide jobs. This is highly unfortunate. The Government has failed to keep up its promise. I request the Hon. Minister for Labour, now the Chief Minister to make a statement in this regard to fulfil their longstanding demand.